**ದಿನಾಂಕ:18.07.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀ ಸವಾಲು:</u> ಪ್ರತಿವಾದಿ ಪರ ವಕೀಲರು ಶ್ರೀ. ಎ.ಎಂ.ಎಂ. ರವರಿಂದ:-**

ನಾನು ಖಾಸಗಿ ಉದ್ಯೋಗ ಮಾಡುತ್ತೇನೆ. ನನ್ನ ಅಂಗಡಿ ದಾವಾ ಸ್ವತ್ತಿನಲ್ಲಿ ಪಕ್ಕದಲ್ಲಿ ಇದೆ. ಸದರಿ ಅಂಗಡಿ ಇನ್ನೂ ನನ್ನ ಕಬ್ಜೆಯಲ್ಲಿಯೇ ಇದೆ. ಸದರಿ ಸ್ವತ್ತಿನ ಅಳತೆ ಅಂದಾಜು 30x52 ಅಡಿ ಇದೆ. ದಾವಾ ಸ್ವತ್ತಿನ ಸಂಪೂರ್ಣ ಜಾಗದಲ್ಲಿ ಮನೆ ಮತ್ತು 3 ಅಂಗಡಿಗಳು ಇವೆ. ಒಂದು ಅಂಗಡಿಯಲ್ಲಿ ಬ್ಯಾಟರಿ ವ್ಯವಹಾರ ಮಾಡುತ್ತೇನೆ, ಇನ್ನೂ 2 ಅಂಗಡಿಗಳನ್ನು ಬಾಡಿಗೆ ಕೊಟ್ಟಿದ್ದೇನೆ. ಒಂದು ಅಂಗಡಿಯ ಬಾಡಿಗೆಯ ಬಾಡಿಗೆಗೆಯನ್ನು ನಾನು ಪಡೆಯುತ್ತೇನೆ ಇನ್ನೊಂದು ಅಂಗಡಿಯ ಬಾಡಿಗೆಯ ಬಾಡಿಗೆಗೆಯನ್ನು ನನ್ನ ಅಣ್ಣಾ ಪಡೆಯುತ್ತಾರೆ. ನಾವು 3 ಜನ ಅಣ್ಣ-ತಮ್ಮಂದಿರು. 3 ಜನಕ್ಕೂ ಒಂದೊಂದು ಅಂಗಡಿ ಇದೆ ಎಂದರೆ ಸರಿ ಆದರೆ ಸಾಕ್ಷಿ ಮುಂದುವರೆದು ಒಂದು ಅಂಗಡಿಯ ಅಳತೆ ಸಣ್ಣದು ಇದ್ದು ಒಂದು ಅಂಗಡಿಯ ಅಳತೆ ದೊಡ್ಡದು ಇದೆ ಆದ್ದರಿಂದ ಸಮನಾಗಿ ವಿಭಾಗ ಮಾಡಬೇಕೆಂದು ಕೇಳಿ ನಾನು ದಾವೆ ಹೂಡಿದ್ದೇನೆ ಎನ್ನುತ್ತಾರೆ. ಒಂದು ಅಂಗಡಿಯ ಅಳತೆ ಮುಂಭಾಗದಲ್ಲಿ 10ಅಡಿ ಇದ್ದು ಹಿಂಭಾಗದಲ್ಲಿ 3 ಅಡಿ ಮಾತ್ರ ಇದೆ, ಇನ್ನೊಂದು ಅಂಗಡಿಯ ಅಳತೆ ಮುಂಭಾಗದಲ್ಲಿ 7*7 ಅಡಿ ಇದೆ, ಮತ್ತೊಂದು ಅಂಗಡಿಯ ಅಳತೆ ಮುಂಭಾಗದಲ್ಲಿ 10x22ಅಡಿ ಇದೆ. 10x22 ಅಡಿ ಇರುವ ಅಂಗಡಿ ನನ್ನ ಅಣ್ಣ ಅಬ್ದುಲ್ ಮುನಾಫ್ ರವರ ಮಕ್ಕಳ ಕಬ್ಜೆಯಲ್ಲಿದೆ. ನನ್ನ ಬಳಿ 7x7 ಅಡಿ ಇರುವ ಅಂಗಡಿ ಇದೆ. ಸದರಿ ಅಂಗಡಿಯ ಹಿಂಭಾಗದಲ್ಲಿ ಹಾರುಣ್ ರಶೀದ್ ಮುಜಾವರ ರವರ ಮಕ್ಕಳು ವಾಸಿಸುತ್ತಾರೆ. ಅಂಗಡಿಯ ಹಿಂಭಾಗದಲ್ಲಿ ನನ್ನ ಮತ್ತು ಅಬ್ದುಲ್ ಮುನಾಫ ರವರ ಕಬ್ಜೆಯು ಸಹ ಇದ್ದು ಅದನ್ನು ನಾವು ಬಾಡಿಗೆ ಕೊಟ್ಟಿದ್ದೇವೆ. ನಮ್ಮ ಕಬ್ಜೆಯಲ್ಲಿರುವ ಜಾಗದ ಅಳತೆಯನ್ನು ನನಗೆ ಹೇಳಲಾಗುವುದಿಲ್ಲ ಆದ್ದರಿಂದ ಸಮನಾಗಿ ವಿಭಾಗ ಮಾಡಬೇಕೆಂದು ನಾನು ದಾವೆ ಹೂಡಿದ್ದೇನೆ ಎನ್ನುತ್ತಾರೆ. ದಾವಾ ಸ್ವತ್ತನ್ನು ಹೊರತುಪಡಿಸಿ ಇನ್ನೊಂದು ಸ್ವತ್ತು ಇದ್ದು ಅದರ ಸಿ.ಟಿ.ಎಸ್ ನಂ.269/3ಬಿ. ಸದರಿ ಸಿ.ಟಿ.ಎಸ್ ನಂ.269/3ಬಿ ಯನ್ನು ನಾನು ಖರೀದಿಸಿದ್ದೇನೆ ಎನ್ನುತ್ತಾರೆ. ನನ್ನ ಸಹೋದರ ಅಬ್ದುಲ್ ಮುನಾಫ ರವರು ಸಹ ಇನ್ನೊಂದು ಮನೆಯನ್ನು ಖರೀದಿಸಿ ವಾಸವಿದ್ದಾರೆ ಅದರ ಸಂಖ್ಯೆ ನನಗೆ ಹೇಳಲಾಗುವುದಿಲ್ಲ.

ನನ್ನ ಸಹೋದರರಿಬ್ಬರೂ ಮರಣ ಹೊಂದಿರುತ್ತಾರೆ. ಪ್ರತಿವಾದಿಯರನ್ನು ದಾವಾ ಸ್ವತ್ತಿನಲ್ಲಿ ವಾಟ್ನಿ ಮಾಡುವಂತೆ ಕೇಳಿದ್ದೀರಾ ಎಂದರೆ ಸಾಕ್ಷಿ ನಾನು ಬಹಳ ದಿನಗಳ ಹಿಂದೆ ಕೇಳಿದ್ದೇನೆ ಎನ್ನುತ್ತಾರೆ. ಸಾಕ್ಷಿ ನನ್ನ ಸಹೋದರರು ಬದುಕಿದ್ದಾಗಿನಿಂದಲೂ ವಿಭಾಗ ಮಾಡಿಕೊಂಡುವಂತೆ ಕೇಳುತ್ತಿದ್ದೇನೆ ಎನ್ನುತ್ತಾರೆ. ದಾವೆಯನ್ನು ಹೂಡುವ ಮೊದಲು ಪ್ರತಿವಾದಿಯರನ್ನು ವಿಭಾಗ ಮಾಡುವಂತೆ ಕೇಳಿದ್ದೀರ ಎಂದರೆ ಇಲ್ಲ ಎನ್ನುತ್ತಾರೆ. ದಾವೆಯನ್ನು ಹೂಡಿದ ನಂತರ ದಾವಾ ಸ್ವತ್ತನ್ನು ವಿಭಾಗ ಮಾಡುವ ಸಲುವಾಗಿ ಪ್ರತಿವಾದಿಯರೊಂದಿಗೆ ನಾನು ಮಾತನಾಡಿದ್ದೇನೆ. ದಾವಾ ಸ್ವತ್ತಿನಲ್ಲಿ ವಿಭಾಗವಾಗಿದ್ದು ಆ ಪ್ರಕಾರ ನಾವು 3 ಜನ ಸಹೋದರರು ಕಬ್ಜೆಯಲ್ಲಿದ್ದೇವೆ ಆದ್ದರಿಂದ ದಾವಾ ಸ್ವತ್ತನು ವಿಭಾಗ ಮಾಡುವ ಪ್ರಶ್ನೆ ಇಲ್ಲ ಎಂದರೆ ಸರಿಯಲ್ಲ, ಸಾಕ್ಷಿ ನಾವು ಕಬ್ಜೆಯಲ್ಲಿರುವ ಸ್ವತ್ತು ದೊಡ್ಡದು ಸಣ್ಣದು ಇದೆ ಹಾಗಾಗಿ ಸಮನಾಗಿ ವಿಭಾಗವಾಗಬೇಕು ಎನ್ನುತ್ತಾರೆ. ನಾನು ಸಿಟಿ ಸರ್ವೇಯರ್ ರವರಿಗೆ ದಾವಾ ಸ್ವತ್ತನ್ನು ಅಳತೆ ಮಾಡುವಂತೆ ಕೇಳಿ ಅರ್ಜಿ ನೀಡಿಲ್ಲ ಎಂದರೆ ಸರಿ. ಸಿಟಿ ಸರ್ವೇ ಯವರಿಂದ ಅಳತೆ ಮಾಡಿಸಿ ಪ್ರತಿವಾದಿಯರಿಗೆ ನೀವು ನೀವು ಇಷ್ಟು ಇಷ್ಟು ತೆಗೆದುಕೊಳ್ಳಿ ಎಂದರೆ ಪ್ರತಿವಾದಿಯರು ನಿಮ್ಮ ಮಾತನ್ನು ಕೇಳುತ್ತಾರೆ ಎಂದರೆ ಸರಿ.

ನಾನು ಕಳೆದ 15 ವರ್ಷಗಳಿಂದ ವೀರಭದ್ರ ನಗರದಲ್ಲಿ ವಾಸಿಸುತ್ತೇನೆ. ನನ್ನ ಇಬ್ಬರು ಮಕ್ಕಳು ವಿದೇಶದಲ್ಲಿ ವಾಸವಿದ್ದಾರೆ, ಒಬ್ಬ ಮಗ ಬೆಂಗಳೂರಿನಲ್ಲಿ ವಾಸವಿದ್ದಾನೆ ಎನ್ನುತ್ತಾರೆ. ವೀರಭದ್ರ ನಗರದಲ್ಲಿರುವ ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ವಾಸವಿರುತ್ತೇವೆ. ನನ್ನ ಮಕ್ಕಳು ನಮ್ಮನ್ನು ನೋಡಿಕೊಳ್ಳುತ್ತಾರೆ ಎಂದರೆ ಸರಿ. ಪ್ರತಿವಾದಿಯರು ನಿಮ್ಮ ಮಾತನ್ನು ಕೇಳುತ್ತಿದ್ದರೂ ಸಹ ವಿನಾ ಕಾರಣ ಪ್ರತಿವಾದಿಯರ ವಿರುದ್ಧ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ದಾವಾ ಸ್ವತ್ತು ಹೆಚ್ಚು ಕಡಿವೆಯಾಗಿ ವಿಭಾಗವಾಗಿದೆ ಆದ್ದರಿಂದ ದಾವೆಯನ್ನು ಹೂಡಿದ್ದೇನೆ ಎನ್ನುತ್ತಾರೆ. ನಿಪಿ-1ರಲ್ಲಿ ನನ್ನ ಮತ್ತು ನನ್ನ ಸಹೋದರನ ಹೆಸರು ಇದ್ದು ಹಾರುಣ್ ರವರ ಮಕ್ಕಳ ಹೆಸರನ್ನು ನಮೂದು ಮಾಡಿಲ್ಲ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ವಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ ಸರಿಯಿದೆ.

ಸಹಿ/-
**4ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಧೀಶರು, ಬೆಳಗಾವಿ.**